**ಅಸಲು ದಾವಾ ನಂ. :189/2021** **ಪಿ ಡಬ್ಲ್ಯೂ:1**

**(ಇಂದು ದಿನಾಂಕಃ 15-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಪ್ರತಿವಾದಿಯರ ಪರ ವಕೀಲರಾದ ಶ್ರೀ ಇ ಪಿ ಜಿ ರವರಿಂದಃ**

1. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ಪ್ರತಿವಾದಿಯರು ನನಗೆ 20 ವರ್ಷಗಳಿಂದ ಪರಿಚಯ ಇರುತ್ತಾರೆ. ಈ ಹಿಂದೆ ಪ್ರತಿವಾದಿಯರೊಂದಿಗೆ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ. ನಾನು ಕೃಷಿ ಮತ್ತು ಟ್ರ್ಯಾಕ್ಟರ್ ಅನ್ನು ಓಡಿಸುತ್ತೇನೆ. ಸನ್ಯಾಸಿಹಳ್ಳಿಗೆ ಮತ್ತು ಬೇಲೂರಿಗೆ 2 ಕಿ.ಮೀ ದೂರ ಆಗುತ್ತದೆ. ಸನ್ಯಾಸಿಹಳ್ಳಿ ಸಕಲೇಶಪುರಕ್ಕೆ ಹೋಗುವ ರಸ್ತೆಯಲ್ಲಿ ಬರುತ್ತದೆ.

2. ದಾವಾ ಆಸ್ತಿ ಸನ್ಯಾಸಿಹಳ್ಳಿ ರಸ್ತೆಯಿಂದ 100 ಅಡಿ ಅಂತರದಲ್ಲಿರುತ್ತದೆ. ಸನ್ಯಾಸಿಹಳ್ಳಿ ಬೇಲೂರು ಟೌನ್ ನ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿಯಲ್ಲ. ಸನ್ಯಾಸಿಹಳ್ಳಿಯಲ್ಲಿ ಸೊಸೈಟಿ ಮತ್ತು ಶಾಲೆ ಇರುತ್ತದೆ ಎಂದರೆ ಸಾಕ್ಷಿ ಆಗ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಸನ್ಯಾಸಿಹಳ್ಳಿಗೆ ಹೋಗಿರುತ್ತೇನೆ. ನಾನು ಪ್ರತಿವಾದಿಯರ ಮನೆಗೆ ಹೋಗಿದ್ದೆ. ದಾವಾ ಅನುಸೂಚಿ ಸ್ವತ್ತು 17.½ X20 ಅಡಿ ಇರುತ್ತದೆ. ಸನ್ಯಾಸಿಹಳ್ಳಿಯಲ್ಲಿ 8-10 ವರ್ಷದ ಹಿಂದೆ 1 ಗುಂಟೆಗೆ 8-10 ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತು 2 ಅಂತಸ್ತಿನ ಮನೆ ಎಂದರೆ ಸಾಕ್ಷಿ ಈಗ ಬಿದ್ದು ಹೋಗಿರುತ್ತದೆ ಎಂದು ಹೇಳುತ್ತಾರೆ. ನಿವೇಶನ ವಿಸ್ತೀರ್ಣ ಹೊರತುಪಡಿಸಿ 2 ಅಂತಸ್ತಿನ ಮನೆ ಕಟ್ಟಲು 40 ಲಕ್ಷ ಆಗುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯತ್ತಾರೆ.

3. ನಾನು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಾಲ ವಸೂಲಾತಿಗಾಗಿ ಯಾವುದೇ ದಾವೆ ಸಲ್ಲಿಸಿಲ್ಲ. ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಬಿ.ಎಂ ಜಯರಾಮ್ ರವರ ವಿರುದ್ಧ ಹಣ ವಸೂಲಿಗಾಗಿ ದಾವೆ ಸಲ್ಲಿಸಿರುತ್ತೇನೆ. ಪ್ರತಿವಾದಿಗಳು ದಾವಾ ಅನುಸೂಚಿ ಸ್ವತ್ತನ್ನು ಮಾರಾಟ ಮಾಡಲು ದಿಃ01.09.2017 ರ ಹಿಂದಿನ ದಿನ ಪ್ರಚುರ ಪಡಿಸಿದರು. ನಿಪಿ-1 ರಲ್ಲಿ ಪ್ರತಿವಾದಿಯರು ದಾವಾ ಅನುಸೂಚಿ ಸ್ವತ್ತನ್ನು ಮಾರಾಟ ಮಾಡಲು ಪ್ರಚುರ ಪಡಿಸಿದ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಯಾವ ದಿನಾಂಕದಂದು ಖರೀದಿ ಮಾಡಲು ಮುಂದೆ ಬಂದಿದ್ದೆ ಎನ್ನುವ ಬಗ್ಗೆ ನಮೂದು ಇರುತ್ತದೆ. ನಿಪಿ-1 ರಲ್ಲಿ ದಾವಾ ಆಸ್ತಿಯ

ವಿಸ್ತೀರ್ಣದ ಬಗ್ಗೆ  ನಮೂದು ಆಗಿಲ್ಲ ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ.

4. ನಿಪಿ-1 ರಲ್ಲಿ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನಾವು ಹೇಳಿದ್ದನ್ನು ಬರೆದಿದ್ದಾರೆ. ನಿಪಿ-1 ಕರಾರನ್ನು ಚಂದ್ರಶೇಖರ್ ರವರು ಬೆಳಗ್ಗೆ 11.00 ಗಂಟೆಗೆ ಟೈಪ್ ಮಾಡಿರುತ್ತಾರೆ. ಸಾಕ್ಷಿದಾರರನ್ನು 2.00 ಗಂಟೆಗೆ ಕರೆಸಿರುತ್ತೇನೆ. ಸಾಕ್ಷಿದಾರರು 10 ವರ್ಷಗಳಿಂದ ನನಗೆ ಪರಿಚಯವಿರುತ್ತಾರೆ. ದಾವಾ ಸ್ವತ್ತಿನ ದಕ್ಷಿಣ ಮತ್ತು ಉತ್ತರಕ್ಕೆ ಮನೆಗಳಿರುತ್ತವೆ. ಚನ್ನೇಗೌಡ ಮತ್ತು ಶಿವು ಎನ್ನುವವರ ಮನೆಗಳು ಇರುತ್ತವೆ. ಪೂರ್ವಕ್ಕೆ ರಾಜುರವರ ಮನೆ, ಪಶ್ಚಿಮಕ್ಕೆ ರಸ್ತೆ ಬರುತ್ತದೆ. ಸದರಿ ಚೆಕ್ ಬಂದಿಯನ್ನು ಪ್ರತಿವಾದಿಯರು ಬರೆಸಿರುತ್ತಾರೆ. ದಾವಾ ಆಸ್ತಿಯ ಪೂರ್ವಕ್ಕೆ ಶಿವಕುಮಾರ್ ರವರ ಮನೆ ಬರುತ್ತದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಚನ್ನೇಗೌಡರ ಮನೆ ಬರುತ್ತದೆ ಎಂದರೆ ಸರಿ. ಉತ್ತರಕ್ಕೆ ರಸ್ತೆ ಎಂದರೆ ಸರಿಯಲ್ಲ.

5. 1ನೇ ಪ್ರತಿವಾದಿಗೆ ಆಸ್ತಿ ಯಾವ ರೀತಿ ಬಂತು ಎಂದು ನಾನು ನೋಡಿಲ್ಲ. ನಾನು ಪ್ರತಿವಾದಿಗಳಿಗೆ ನೀಡಿದ ನೋಟೀಸ್ ನಲ್ಲಿ ಹಣವನ್ನು ನಗದಾಗಿ ನೀಡಿದ ಬಗ್ಗೆ ಹೇಳಿರುವುದಿಲ್ಲ. ನೋಟೀಸ್ ನಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿರುತ್ತದೆ. ನೋಟೀಸ್ ಪ್ರತಿವಾದಿಗಳಿಗೆ ದಿಃ31.08.2019 ರಂದು ಜಾರಿಯಾಗಿರುತ್ತದೆ.

(ಮುಂದುವರೆದ ಪಾಟೀಸವಾಲಿಗೆ ಪ್ರತಿವಾದಿಯರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**(ನಾಗೇಂದ್ರ)**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**